**ಬೆಳಗಾವಿ ಜಿಲ್ಲೆಯಲ್ಲಿ ಬಂಡಿಂಗ್ ಯೋಜನೆಯನ್ನು ಕೈಗೊಳ್ಳುವ ಬಗ್ಗೆ**

4240 (4901) : ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಮೊತ್ತದ ಬಂಡಿಂಗ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಆ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಎಷ್ಟು ಮೊತ್ತದ ಬಂಡಿಂಗ್ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ;

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಹೆಚ್ಚಿನ ಬರಗಾಲವಿರುವುದರಿಂದ ಇಲ್ಲಿ ಹೆಚ್ಚಿನ ಬಂಡಿಂಗ್ ಯೋಜನೆಗಳನ್ನು ಕೈಗೊಂಡು ರೈತರಿಗೆ ಕೆಲಸ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ವಿವಿಧ ಯೋಜನೆಗಳಡಿಯಲ್ಲಿ ರೂ. 69.26 ಲಕ್ಷ ಮೊತ್ತದ ಬಂಡಿಂಗ್ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಇದರ ತಾಲ್ಲೂಕುವಾರು ವಿವರಗಳನ್ನು ಅನುಬಂಧ –1 ರಲ್ಲಿ ನೀಡಲಾಗಿದೆ;

ಆ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಈ ವರ್ಷ ಕ್ರಮವಾಗಿ ರೂ. 19.20 ಲಕ್ಷ ಮತ್ತು ರೂ. 15.066 ಲಕ್ಷ ಮೊತ್ತದ ಬಂಡಿಂಗ್ ಕಾಮಗಾರಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು.

**ಅನುಬಂಧ–1**

**2003–04ನೇ ಸಾಲಿನಲ್ಲಿ ಕೈಗಳ್ಳುವ ಬಂಡಿಂಗ್ ಕಾಮಗಾರಿಗಳ ವಿವರ**

**(ರೂ. ಲಕ್ಷಗಳಲ್ಲಿ)**

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| | | | | | ಸಂಪೂರ್ಣ | | |
| | | | ಪಶ್ಚಿಮ ಘಟ್ಟ | ಬರಗಾಲ | ಗ್ರಾಮೀಣ | ವಿಶೇಷ | ಒಟ್ಟು |
| ಕ್ರ. ಸಂ. | ತಾಲ್ಲೂಕು | ನದಿಕಣಿವೆ ಯೋಜನೆ | ಅಭಿವೃದ್ಧಿ ಯೋಜನೆ | ಪರಿಹಾರ ಯೋಜನೆ | ರೋಜಗಾರ್ ಯೋಜನೆ | ಘಟಕ ಯೋಜನೆ | |
| 1. | ಸವದತ್ತಿ | 2.310 | 2.800 | 9.100 | 0.500 | 0.356 | 15.066 |
| 2. | ಬೈಲಹೊಂಗಲ | – | 10,000 | 8,700 | 0,500 | – | 19,200 |
| 3. | ಖಾನಾಪುರ | – | – | – | 0.5000 | – | 0.500 |
| 4. | ಬೆಳಗಾವಿ | – | – | – | 0,500 | – | 0,500 |
| 5. | ಹುಕ್ಕೇರಿ | – | 2,530 | 9,100 | 0,500 | – | 12,130 |
| 6. | ಚಿಕ್ಕೋಡಿ | – | – | 1,600 | 0,500 | 0,356 | 2,456 |
| 7. | ರಾಯಬಾಗ | – | – | 2,700 | 0,500 | 0356 | 3,556 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 8. | ಗೋಕಾಕ್ | – | – | 2,000 | 0,500 | 0,356 | 2,856 |
| 9. | ರಾಮದುರ್ಗ | – | – | 8,250 | 0,500 | 0,356 | 9,106 |
| 10. | ಅಥಣಿ | – | – | 3,600 | 0,500 | 0,356 | 4,456 |
| | ಒಟ್ಟು | 2,310 | 15,330 | 45,050 | 5,000 | 2,136 | 69,826 |

**ರಾಜ್ಯದ ರೈತರಿಗೆ ಬೆಳೆ ವಿಮೆ ಕಡ್ಡಾಯಗೊಳಿಸುವುದರ ಬಗ್ಗೆ**

4241(4902) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗೆ ಬೆಳೆ ವಿಮೆಯನ್ನು ಕಡ್ಡಾಯಗೊಳಿಸಿ ಎಲ್ಲಾ ಬೆಳೆಗಳನ್ನು ವಿಮೆ ವ್ಯಾಪ್ತಿಗೆ ಒಳಪಡಿಸುವ ಸಂಗತಿ ಸರ್ಕಾರದ ಮುಂದೆ ಇದೆಯೇ;

ಆ) ಸರ್ಕಾರ ಈಗ ಬೆಳೆ ವಿಮೆ ಮಾಡಲು ಯಾವ ಯಾವ ನೀತಿಯನ್ನು ಅನುಸರಿಸುತ್ತಿದೆ;

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಬೆಳೆ ವಿಮೆ ಪಡೆಯಲು ಅರ್ಹರಿದ್ದರೂ ಕೂಡಾ ಅಧಿಕಾರಿಗಳು ವಿಮಾ ಅದಿಕಾರಿಗಳಿಗೆ ತಪ್ಪು ಮಾಹಿತಿ ನೀಡಿರುವುದರಿಂದ ರೈತರಿಗೆ ವಿಮೆ ಹಣ ದೊರೆಯದೇ ಇರುವ ಸಂಗತಿ ಸಕರದ ಗಮನಕ್ಕೆ ಬಂದಿದೆಯೇ;

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಎಷ್ಟು ಮೊತ್ತದ ವಿಮೆ ಮಾಡಿಸಿದ್ದರು; ಹಾಗೂ ಎಷ್ಟು ಪ್ರೀಮಿಯಂ ಹಣವನ್ನು ಪಾವತಿಸಿದ್ದರು;

ಉ) ವಿಮೆ ಇಲಾಖೆಯವರು ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ವಿಮೆ ಹಣವನ್ನು ಯಾವ ಯಾವ ಬೆಳೆಗಳಿಗೆ ಕೊಟ್ಟಿರುವರು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಇಲ್ಲ.

ಆ) ಈ ಬಗ್ಗೆ ಕೇಂದ್ರ ಸರ್ಕಾರವು ರೂಪಿಸಿರುವ ನೀತಿಯ ಪ್ರಕಾರ ಬೆಳೆ ವಿಮೆ ಯೋಜನೆಯು ಸಂಘ:ಸಂಸ್ಥೆಗಳ ಮೂಲಕ ಬೆಳೆ ಸಾಲ ಪಡೆದ ರೈತರಿಗೆ ಕಡ್ಡಾಯವಾಗಿದ್ದು ಉಳಿದವರಿಗೆ ಐಚ್ಛಿಕವಾಗಿರುತ್ತದೆ.

ಇ) ಇಲ್ಲ.

ಈ) 2002ರ ಮುಂಗಾರು ಹಂಗಾಮಿನಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ರೈತರು ಕ್ರಮವಾಗಿ ರೂ. 8,56,800–00 ಮತ್ತು ರೂ. 6,94, 195–00 ಪ್ರೀಮಿಯಂ ಹಣ ತುಂಬಿ ರೂ. 2,26,89, 262–00 ಮತ್ತು ರೂ. 2,53,27,015–00 ಗಳ ಮೊತ್ತಕ್ಕೆ ವಿಮೆ ಮಾಡಿಸಿರುವರು.

ಉ) ಭಾರತೀಯ ಸಾಮಾನ್ಯ ವಿಮಾ ನಿಗಮವು ಬೈಲಹೊಂಗಲ ತಾಲ್ಲೂಕಿಗೆ ಅಧಿಸೂಚಿಸಿದ ಜೋಳ, ಹೆಸರು, ತೊಗರಿ ಮತ್ತು ಸೋಯಾ ಅವರೆ ಬೆಳೆಗಳಿಗೆ ಹಾಗೂ ಸವದತ್ತಿ ತಾಲ್ಲೂಕಿಗೆ ಅಧಿಸೂಚಿಸಿದ ಜೋಳ, ಹೆಸರು ತೊಗರಿ ಮತ್ತು ಸೂರ್ಯಕಾಂತಿ ಬೆಳೆಗಳಿಗೆ ಬೆಳೆ ನಷ್ಟ ಪರಿಹಾರವನ್ನು ಕ್ರಮವಾಗಿ ರೂ. 31,85, 282–00 ಮತ್ತು ರೂ. 1,54,94,474–00 ಗಳೆಂದು ಇತ್ಯರ್ಥಗೊಳಿಸಿದ್ದು,